**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ಚಿಕ್ಕಮಗಳೂರು

ಸ್ಪೆಷಲ್ ಮೊಕದ್ದಮೆ ನಂಃ **74/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಮುದ್ದಪ್ಪ | ಪಿಡಬ್ಲೂ - 06 |
| ತಂದೆಯ ಹೆಸರು | - | ಈರಯ್ಯ | ಸಿಡಬ್ಲೂ - 15 |
| ವಯಸ್ಸು | - | 61 ವರ್ಷ | |
| ಉದ್ಯೋಗ | - | ನಿವೃತ್ತ ಪಿ.ಎಸ್.ಐ. | |
| ವಾಸ ಸ್ಥಳ | - | ಚಿಕ್ಕಮಗಳೂರು | |

ದಿನಾಂಕಃ 23-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿಃ 20-07-2020 ರಿಂದ ಜುಲೈ 2025 ರವರೆಗೆ ಚಿಕ್ಕಮಗಳೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ 27-12-2022 ರಂದು ರಾತ್ರಿ 8 ಗಂಟೆಗೆ ಚಾಸಾ.14 ರವರು ಹಾಜರಾಗಿ ನಿಪಿ.1 ನ್ನು ತಂದು ಹಾಜರುಪಡಿಸಿದ್ದು ಅದನ್ನು ಸ್ವೀಕರಿಸಿರುತ್ತೇನೆ. ನಿಪಿ.1 ರಲ್ಲಿರುವ ನನ್ನ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ನಿಪಿ.1 ರ ಆಧಾರದ ಮೇಲೆ ಈ ಪ್ರಕರಣದ ಗುನ್ಹೆಯನ್ನು ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಸದರಿ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.7 ಎಂದು ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ವಿಶೇಷ ಪ್ರಕರಣವಾದ್ದರಿಂದ ಮುಂದಿನ ತನಿಖೆಯನ್ನು ಚಾಸಾ.16 ರವರಿಗೆ ಹಸ್ತಾಂತಿರಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತನ ಪರವಾಗಿ ಶ್ರೀ ಡಿ ಸಿ ಪಿ ವಕೀಲರಿಂದ –</u>

3. ದಿಃ 27-12-2022 ರಂದು ಠಾಣಾಧಿಕಾರಿ ನಾನೇ ಆಗಿದ್ದೆ ಎಂದರೆ ಸರಿ. ಆ ದಿನ ಬೆಳಗಿನಿಂದ ಈ ಪ್ರಕರಣದ ಕುರಿತು ನನಗೆ ಮಾಹಿತಿ ಬಂದಿರಲಿಲ್ಲ. ರಾತ್ರಿಯ ಎಸ್.ಹೆಚ್.ಓ. ಈ ಘಟನೆಯ ಕುರಿತು ನನಗೆ ಮಾಹಿತಿ ನೀಡಿಲ್ಲ ಎಂದರೆ ಸರಿ. ಚಾಸಾ.14 ರವರು ದೂರನ್ನು ನನಗೆ ನೀಡುವವರೆಗೆ ಈ ಪ್ರಕರಣದ ಮಾಹಿತಿ ನನಗೆ ಇರಲಿಲ್ಲ ಎಂದರೆ ಸರಿ.

4. ನಿಪಿ.1 ನ್ನು ಪಡೆಯುವ ಮೊದಲು ಘಟನೆಯಾದ ಕುರಿತು ನಾನು ಪರಿಶೀಲನೆ ಮಾಡಿರುವುದಿಲ್ಲ.ಯಾವುದೇ ಘಟನೆ ನಡೆಯದಿದ್ದರೂ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಕಿರಣ್ ಕಿಣಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ